ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ದಿನಾಂಕ 1-4-2005 ರಿಂದ 31-1-2007ರ ವರೆಗೆ

ಮುದ್ರಾಂಕ ಶುಲ್ಕ	ನೋಂದಣಿ ಶುಲ್ಕ	ನೋಂದಣಿಯಾಗದ ಐಚ್ಛಿಕ ದಸ್ತಾವೇಜುಗಳು	ಒಟ್ಟು
280352672	39235204	27417596	37005472

ಆ)ಈ ಮಾರಾಟದಿಂದ ಬಂದ ಹಣವು ರಾಜ್ಯದ ರಾಜಸ್ವ ನಿಧಿಗೆ ಸೇರುತ್ತದೆ ಕಂದಾಯ ಇಲಾಖೆಯು ಇದನ್ನು ನೇರವಾಗಿ ಖರ್ಚು ಮಾಡಲು ಸಾಧ್ಯವಿಲ್ಲ

ಇ) ಕರ್ನಾಟಕ ಪಂಚಾಯತ್ ರಾಜ್ (ಹೆಚ್ಚುವರಿ ಮುದ್ರಾಂಕ ಶುಲ್ಕದ ಸಂಗ್ರಹಣೆ) ನಿಯಮಗಳು 1997, ರ ನಿಯಮ 5 (2)ರಂತೆ ರಾಜ್ಯದಲ್ಲಿ ಸಂಗ್ರಹಣೆಯಾದ ಅಧಿಭಾರ ಶುಲ್ಕದ ವಿವರಗಳನ್ನು ಕ್ರೋಢೀಕರಿಸಿ ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯದಲ್ಲಿನ ತಾಲ್ಲೂಕು ಪಂಚಾಯಿತಿಗಳಿಗೆ ಮೊಬಲಗನ್ನು ಹಂಚಲಾಗುತ್ತದೆ

ಈ) "ಆ"ಗೆ ನೀಡಿರುವ ಉತ್ತರದ ಕಾರಣದಿಂದ ಉದ್ಭವಿಸುವುದಿಲ್ಲ

807 (1239) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸವಣೂರ ನಗರ ಭೂಮಾಪನ (ಸಿಟಿ ಸರ್ವೆ) ಈವರೆಗೂ ಆಗದೇ ಇರುವುದು ನಿಜವಲ್ಲವೇ ,

ಆ) ಈ ಕಾರ್ಯವನ್ನು ಮಾಡಲು ಸನ್ 2002-03 ರಲ್ಲಿ ಸವಣೂರ ಭೂದಾಖಲೆಗಳ ಸಹಾಯ ನಿರ್ದೇಶಕರಿಂದ ಭೂದಾಖಲೆಗಳ ಉಪ ನಿರ್ದೇಶಕರು ಧಾರವಾಡ ಇವರಿಗೆ ಪ್ರಸ್ತಾವನೆ ಹೋಗಿ ಅಲ್ಲಿಂದ ಜಂಟಿ ನಿರ್ದೇಶಕರು ಭೂದಾಖಲೆ ವಿಭಾಗ ಬೆಳಗಾಂವ ಇವರಿಗೆ ದಿನಾಂಕ 19-03-2005 ರಂದು ಪ್ರಸ್ತಾವನೆ ಹೋಗಿದ್ದರೂ ಸಹ ಈವರೆಗೂ ಯಾವುದೇ ಪ್ರಗತಿ ಕಾಣದೇ ಇರಲು ಕಾರಣವೇನು ,

ಇ) ಎಷ್ಟು ಸಮಯದೊಳಗೆ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ,

ಈ) ಸವಣೂರ ನಗರದಲ್ಲಿ ಕಂದಾಯ ಇಲಾಖೆಗೆ ಹೊಸದಾಗಿ ವಸತಿ ಗೃಹಗಳನ್ನು ನಿರ್ಮಿಸಿದ್ದು ಅವುಗಳನ್ನು ಈವರೆಗೂ ಖಾಲಿ ಇರುವ ಅವುಗಳನ್ನು ಯಾವಾಗ ಉಪಯೋಗಿಸುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ,

ಉ) ಸವಣೂರ-ಶಿಗ್ಗಾಂವ ಪಟ್ಟಣ ಹಾಗೂ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಬಿ ಪಿ ಎಲ್ ಪಡಿತರ ಚೀಟಿಗಳ ಗುರಿ ನಿಗದಿಪಡಿಸಿರುವುದು ಸರಿ ಇರದೇ ಹೆಚ್ಚಿನ ಬೇಡಿಕೆ ಇದ್ದು, ಹೆಚ್ಚಿನ ಗುರಿ ನಿಗದಿವಡಿಸಿ ಅನುಕೂಲ ಮಾಡಿಕೊಡಲು ಸರ್ಕಾರ ತೀರ್ಮಾನಿಸಿದೆಯೇ ,

ಊ) ಸವಣೂರ ನಗರದಲ್ಲಿ ಸರ್ಕಾರಿ ಕಛೇರಿಗಳು ಖಾಸಗಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸರ್ಕಾರಕ್ಕೆ ಇದರಿಂದ ಹೊರೆಯಾಗಿರುವ ಕಾರಣ

ಸವಣೂರ ತಾಲ್ಲೂಕು ಪಂಚಾಯಿತಿ ಕಟ್ಟಡದಲ್ಲಿ ಕಟ್ಟಡಗಳು ಖಾಲಿ ಇದ್ದು ಅಲ್ಲಿಗೆ ಕಛೇರಿಯನ್ನು ಸ್ಥಳಾಂತರಿಸಲು ಹಾಗೂ ಮಿನಿ ವಿಧಾನಸೌಧಕ್ಕೆ ಹೆಚ್ಚಿನ ಕೊರಡಿ ನಿರ್ಮಾಣ ಮಾಡಲು ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಋ) ಈ ವಿಷಯಗಳ ಬಗ್ಗೆ ತೀವ್ರಗತಿಯಲ್ಲಿ ಕ್ರಮ ಕೈಗೊಳ್ಳುವುದು ಯಾವಾಗ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು

ಆ) ರಾಜ್ಯದಲ್ಲಿ ಒಟ್ಟು 225 ನಗರ/ಪಟ್ಟಣ ಪ್ರದೇಶಗಳಿದ್ದು, ಅವುಗಳ ಪೈಕಿ 48 ನಗರ / ಪಟ್ಟಣಗಳಲಿ ಈಗಾಗಲೇ ನಗರಮಾಪನ ಜಾರಿಯಲ್ಲಿರುತ್ತದೆ ಉಳಿದ ನಗರ/ಪಟ್ಟಣ ಪ್ರದೇಶಗಳಲ್ಲಿ ನಗರಮಾಪನ ಜಾರಿಗೊಳಿಸುವ ಬಗ್ಗೆ ಇಲಾಖೆಯಲ್ಲಿ ಚಿಂತನೆ ನಡೆಸಿದ್ದು ಈ ಬಾಬ್ತು 177 ನಗರ/ಪಟ್ಟಣ ಪ್ರದೇಶಗಳಿಗೆ ನಗರಮಾಪನ ಕಾರ್ಯ ಕೈಗೊಳ್ಳಲು ಒಂದು ಸಮಗ್ರ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಸದರಿ ಪ್ರಸ್ತಾವನೆಯಲ್ಲಿ ಸವಣೂರ ನಗರಮಾಪನವೂ ಸಹ ಸೇರ್ಪಡೆಯಾಗಿರುತ್ತದೆ ಅನುದಾನದ ಲಭ್ಯತೆಯನ್ವಯ ಈ ಬಗ್ಗೆ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುವುದು

ಇ) ಮೇಲಿನ (ಆ) ಪ್ರಶ್ನೆಗೆ ನೀಡಲಾದ ಉತ್ತರದಿಂದ ಉದ್ಭವಿಸುವುದಿಲ್ಲ

ಈ) ಕರ್ನಾಟಕ ಗೃಹ ಮಂಡಳಿ ವತಿಯಿಂದ ಸವಣೂರು ನಗರದಲ್ಲಿ ಕಂದಾಯ ಇಲಾಖೆಗೆ ಹೊಸದಾಗಿ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ ವಸತಿ ಗೃಹಗಳಲ್ಲಿ ಮೂಲಬೂತ ಸೌಲಭ್ಯಗಳನ್ನು ಒದಗಿಸಲು ಕರ್ನಾಟಕ ಗೃಹ ಮಂಡಳಿಗೆ ತಿಳಿಸಲಾಗಿದ್ದು, ಮೂಲ ಸೌಕರ್ಯಗಳನ್ನು ಒದಗಿಸಿದ ನಂತರ ಈ ವಸತಿ ಗೃಹಗಳನ್ನು ಉಪಯೋಗಿಸುವುದಿಲ್ಲ

ಉ) ಅರ್ಹ ಫಲಾನುಭವಿಗಳನ್ನು ಗುರುತಿಸಲು ಸರ್ಕಾರವು ಕೆಲವೊಂದು ಮಾನದಂಡಗಳನ್ನು ರೂಪಿಸಿ ಅದರನ್ವಯ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಲಾಗಿತ್ತು ಈ ಪ್ರಕ್ರಿಯೆಯಲ್ಲಿ ಅರ್ಹ ಎಲ್ಲಾ ಫಲಾನುಭವಿಗಳಿಗೆ ಬಿ ಪಿ ಎಲ್ ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ ಇದಕ್ಕಾಗಿ ಯಾವುದೇ ಹೆಚ್ಚಿನ ಗುರಿಯನ್ನು ನಿಗದಿಪಡಿಸಿಲ್ಲ

ಊ) ಸವಣೂರ ತಾಲ್ಲೂಕು ಪಂಚಾಯಿತಿ ಕಟ್ಟಡವು ಸವಣೂರ ಪಟ್ಟಣದಿಂದ 3-4 ಕಿ ಮೀ ಅಂತರದಲ್ಲಿ ಇದ್ದು, ಸಾರ್ವಜನಿಕರಿಗೆ ಪ್ರತಿ ನಿತ್ಯದ ಕೆಲಸ ಕಾರ್ಯಗಳಿಗೆ ಹೋಗಿಬರಲು ತೊಂದರೆ ಆಗುತ್ತಿದೆ ಈ ತಾಲ್ಲೂಕಿನಲ್ಲಿರುವ ಮಿನಿ ವಿದಾನಸೌದದಲ್ಲಿ ಹೆಚ್ಚಿನ ಕೊರಡಿಗಳನ್ನು ನಿರ್ಮಾಣ ಮಾಡಲು ಅನುದಾನದ ಲಭ್ಯತೆಯನ್ನು ಆಧರಿಸಿ ಹೆಚ್ಚುವರಿ ಕೊರಡಿಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು

ಋ) ಅನುದಾನದ ಲಭ್ಯತೆಯನ್ವಯ ಜರೂರಾಗಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು

808 (1240) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶೇಷ ಆರ್ಥಿಕ ವಲಯ (Special Economic Zone) ಯೋಜನೆಯಡಿಯಲ್ಲಿ ಸರ್ಕಾರ ರಾಜ್ಯದಾದ್ಯಂತ ಯಾವ ಯಾವ ಊರುಗಳಲ್ಲಿ ಎಷ್ಟೆಷ್ಟು ಭೂಮಿಯನ್ನು ಯಾವ ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ,

ಆ) ಇನ್ನು ಮುಂದೆ ರಾಜ್ಯದಾದ್ಯಂತ ಯಾವ ಯಾವ ಊರುಗಳಿಗೆ ಯಾವ ಯಾವ ಉದ್ದೇಶಗಳಿಗೆ ಭೂಮಿ ಮಂಜೂರು ಮಾಡಲು ಸರ್ಕಾರ ಯೋಜಿಸಿದೆ ,

ಇ) ಈ ಯೋಜನೆ ಅನುಷ್ಠಾನಗೊಳ್ಳದೆ ಇರಲು ಕಾರಣಗಳೇನು ,

ಈ) ಶಿಗ್ಗಾಂವ – ಸವಣೂರ ಪಟ್ಟಣಗಳಲ್ಲಿರುವ ಸಣ್ಣ ಕೈಗಾರಿಕಾ ನಿವೇಶನಗಳನ್ನು ಈವರೆಗೂ ಹಂಚಿಕೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಹಾಗಿದ್ದಲ್ಲಿ, ಸಣ್ಣ ಕೈಗಾರಿಕಾ ಉದ್ದಿಮೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ ?

ಶ್ರೀ ಶಿವಾನಂದ ಎಸ್ ನಾಯಕ್ (ಸಣ್ಣ ಕೈಗಾರಿಕಾ ಸಚಿವರು)

ಅ) ರಾಜ್ಯ ಸರ್ಕಾರವು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರ ವತಿಯಿಂದ ಕೆಳಕಂಡ 5 ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಲಾಗುತ್ತಿದ್ದು, ಇವುಗಳಿಗೆ ಭಾರತ ಸರ್ಕಾರದಿಂದ ಅನುಮೋದನೆ ದೊರೆತಿರುತ್ತದೆ

ಕ್ರ ಸಂ	ವಲಯ	ಸ್ಥಳ	ವಿಸ್ತೀರ್ಣ ಹೆಕ್ಟೇರು
1	ಜವಳಿ	ಹಾಸನ	232 45
2	ಆಗ್ರೋ ಫುಡ್ ಪ್ರೊಸೆಸಿಂಗ್	ಹಾಸನ	157 91
3	ಫಾರ್ಮಾಸಿಟಿಕಲ್ ಅಂಡ್ ಬಯೋಟೆಕ್	ಹಾಸನ	281 21
4	ಐಟಿ/ಐಟಿಇಎಸ್	ಮಂಗಳೂರು	203 00
5	ಆಟೋ ಮೋಟಿವ್ ಮತ್ತು ಆಟೋ ಕಾಂಪೋನೆಂಟ್ಸ್	ಶಿವಮೊಗ್ಗ	169 00

ಆ) ರಾಜ್ಯ ಸರ್ಕಾರವು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರ ವತಿಯಿಂದ ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ 500 ಎಕರೆ ಪ್ರದೇಶದಲ್ಲಿ ಏರೋಸ್ಪೇಸ್ ಕೈಗಾರಿಕೆಗಳ ಸಂಬಂಧಿಸಿದ